# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ**64/2014**
ಡಿ.ಡಬ್ಲ್ಯೂಃ**2,** ಲಕ್ಷಪ್ಪ

**ದಿನಾಂಕ :19-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಮುಖ್ಯ ವಿಚಾರಣೆ :- ಶ್ರೀ ಜೆ ಪಿ ಎ ವಕೀಲರಿಂದ

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.

# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ **64/2014**
ಪಿ.ಡಬ್ಲ್ಯೂಃ ಮಹಾದೇವಪ್ಪ

**ದಿನಾಂಕ :19-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**
**ಪಾಟಿ ಸವಾಲು :- ಶ್ರೀಮತಿ ಎಮ್ ವಿ ಎಲ್ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ**

ನಮ್ಮ ಕುಂಟುಂಬಕ್ಕೆ 1975 ಕ್ಕಿಂತ ಮೊದಲು 142 ಎಕರೆ ಆಸ್ತಿ ಇತ್ತು. ಸರ್ವೆ ನಂಬರ 42 ರಿಂದ 45, 75, 13, 73/1 ಜಮೀನುಗಳು ಸಾಲಹಳ್ಳಿ ಗ್ರಾಮದಲ್ಲಿ ಇದ್ದವು ಎಂದರೆ ಸರಿ. 1972-73 ರಲ್ಲಿ ಲ್ಯಾಂಡ ಸಿಲಿಂಗ್ ಕಾಯ್ದೆ ಪ್ರಕಾರ ಒಬ್ಬರಿಗೆ 54 ಎಕರೆ ಮಾತ್ರ ಇರಬಹುದು ಎಂದು ಇತ್ತು ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ಸಾಯಬಣ್ಣ ಹಾಗೂ ಶಿವಕಾಂತಮ್ಮ ಇವರ ಗಂಡ ಬಸ್ಸಪ್ಪ ಇವರು ಇಬ್ಬರು ಪಾರಂ ನಂಬರ 11 ತುಂಬಿದ್ದರು ಎಂದರೆ ಸರಿ. ನನ್ನ ತಂದೆ ಸಾಯಬಣ್ಣ ಹಾಗೂ ಶಿವಕಾಂತಮ್ಮ ಇವರ ಗಂಡ ಬಸ್ಸಪ್ಪ ಇಬ್ಬರು ಒಂದೇ ತಂದೆಗೆ ಜನಿಸಿದ್ದವರು ಎಂದರೆ ಸರಿ.

ನನ್ನ ತಂದೆ ಸಲ್ಲಿಸಿದ ಅರ್ಜಿ ನಂಬರ 1446/1975-76 ಮತ್ತು ಬಸ್ಸಪ್ಪ ತುಂಬಿದ ಅರ್ಜಿಯ ಸಂಖ್ಯೆ 966/1975-76 ಎಂದು ಇತ್ತು ಎಂದರೆ ಸರಿ. ಈ ಬಗ್ಗೆ ದಿನಾಂಕ 18-09-1988 ರಂದು ಭೂ ನ್ಯಾಯಾ ಮಂಡಳಿಯವರು ಇಬ್ಬರು ತಲಾ 54 ಎಕರೆ ಜಮೀನು ಇಟ್ಟುಕೊಳ್ಳಬಹುದು ಎಂದು ಆದೇಶ ಮಾಡಿದ್ದರು ಎಂದರೆ ಸರಿ. ಅದೇ ಆದೇಶದಲ್ಲಿ ತಲಾ 54 ಎಕರೆ ಉಳಿಸಿಕೊಂಡು ಬಾಕಿ ಹೆಚ್ಚುವರಿಯಾದ 34 ಎಕರೆ 28 ಗುಂಟೇ ಜಮೀನನ್ನು ಸರಕಾರಕ್ಕೆ ಒಪ್ಪಿಸಬೇಕು ಎಂದು ಆದೇಶ ಮಾಡಿದ್ದರು ಎಂದರೆ ಸರಿ. ಆ ಆದೇಶದ ಪ್ರಕಾರ ನನ್ನ ತಂದೆ ತಮ್ಮಗೆ ಬೇಕಾದ 54 ಎಕರೆ ಯಾವುದು ಎಂದು ಮತ್ತು ಯಾವುದನ್ನು ಸರಕಾರಕ್ಕೆ ಒಪ್ಪಿಸುತ್ತೇವೆ ಎಂದು ತಿಳಿಸಿ ಅರ್ಜಿ ಹಾಕಿಲ್ಲ. ಈ ಆದೇಶದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಅಫೀಲು ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಆ ಪ್ರಕಾರ 2 ನೇ ಪ್ರತಿವಾದಿಯು ಸರ್ವೆ ನಂಬರ 45, 75 ಮತ್ತು ದಾವಾ ಸ್ವತ್ತು ಇವುಗಳನ್ನು ಇಟ್ಟುಕೊಳ್ಳುವುದಾಗಿ ನಿಪಿ-22 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ ದಿನಾಂಕ 27-09-1998 ರಲ್ಲಿ 2 ನೇ ಪ್ರತಿವಾದಿಗೆ ಸರ್ವೆ ನಂಬರ 45, 75 ಮತ್ತು 13 ರಲ್ಲಿ 54 ಎಕರೆ ಜಮೀನು ಇಟ್ಟುಕೊಳ್ಳುವ ಬಗ್ಗೆ ಅನುಮತಿ ನೀಡಿ ಆದೇಶ ಮಾಡಲಾಯಿತು ಎಂದರೆ ಸಾಕ್ಷಿ ಆ ಬಗ್ಗೆ ಗೊತ್ತಿಲ್ಲ ನಮ್ಮ ಪ್ರಕರ ಜಿಲ್ಲಾ ನ್ಯಾಯಾಲಯದಲ್ಲಿ ಇತ್ತು ಎಂದು ಹೇಳುತ್ತಾರೆ. ಅದೇ ಆದೇಶದಲ್ಲಿ ಸ್ವರ್ವ ನಂಬರ 42, 43, 44,ಮತ್ತು 73/1 ರಲ್ಲಿ 54 ಎಕರೆ ಜಮೀನನ್ನು ನಾವು ಇಟ್ಟುಕೊಳ್ಳಬಹುದು ಎಂದು ಮತ್ತು ಹೆಚ್ಚಿಗೆ ಜಮೀನನ್ನು ಸರಕಾರಕ್ಕೆ ಒಪ್ಪಿಸಬೇಕು ಎಂದು ಆದೇಶದ ಆಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

**ಅಸಲು ದಾವಾ ನಂಃ 64/2014**
**ಪಿ.ಡಬ್ಲ್ಯೂಃ ಮಹಾದೇವಪ್ಪ**

ನಾವು ಈಗ ಮೇಲೆ ಹೇಳಿದಂತೆ ಉಚ್ಚ ನ್ಯಾಯಾಲಯಕ್ಕೆ ಯಾವ ಆದೇಶದ ವಿರುದ್ಧ ಹೋಗಿದ್ದೀರಿ ಎಂದು ಕೇಳಲಾಗಿ ಸಾಕ್ಷಿ ನನ್ನ ತಂದೆ ಹೋಗಿದ್ದರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಪ್ರಕರಣದ ಅರ್ಜಿಯ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಉಚ್ಚ ನ್ಯಾಯಾಲಯದಲ್ಲಿ ನನಗೆ ಇನ್ನೊಬ್ಬ ಮಗ ಇದ್ದು ಅವರಿಗೂ 54 ಎಕರೆ ಬರುತ್ತದೆ ಹಾಗಾಗೀ ನಮ್ಮಗೆ ಯಾವುದೇ ಹೆಚ್ಚುವರಿ ಜಮೀನು ಇಲ್ಲ ಎಂದು ಪ್ರಕರಣ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆಗೆ ಗೊತ್ತು ಎಂದು ಹೇಳುತ್ತಾರೆ. ಭೂ ನ್ಯಾಯಾಮಂಡಳಿ ಆದೇಶದ ನಂತರ ದಾವಾ ಸ್ವತ್ತು ಸರ್ವೆ ನಂಬರ 13 ಇದು ಶಿವಕಾಂತಮ್ಮ ಇವರ ಕಬ್ಜೆಯಲ್ಲಿದ್ದು ಅವರೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಇಲ್ಲ ಅದು ನಮ್ಮ ಜಂಟಿ ಕುಂಟುಂಬದ ಆಸ್ತಿ ಎಂದು ಹೇಳುತ್ತಾರೆ. ಆ ಬಗ್ಗೆ ಪಹಣಿ ಸಹ 2 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿತ್ತು ಎಂದರೆ ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇತ್ತು ಎಂದು ಹೇಳುತ್ತಾರೆ. ಸದರಿ ಸ್ವತ್ತುನ್ನು 2 ನೇ ಪ್ರತಿವಾದ ತನ್ನ ಖಾಸಗಿ ಅಡಚಣೆಗಾಗಿ ವಾದಿಗೆ ನಿಪಿ-1 ರ ಪ್ರಕರ ಖರೀದಿ ಪತ್ರ ಬರೆದುಕೊಟ್ಟು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಪ್ರಕರಣ ಚಾಲ್ತಿಯಲ್ಲಿದ್ದಗ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಆ ದಿನದಿಂದ ವಾದಿಯು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ಇಲ್ಲ ನಾವೇ ಕಬ್ಜೆಯಲ್ಲಿದ್ದೇವೇ ಎಂದು ಹೇಳುತ್ತಾರೆ. ದಾವಾ ಸ್ವತ್ತು ಸರ್ವೆ ನಂಬರ 13 ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲದಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ